ಮಕ್ಕಳ ರಕ್ಷಣೆಗೆ ಆಪರೇಷನ್ ಸ್ಮೈಲ್

■ ಭಿಕ್ಷಾಟನೆ ಕೂಪದಲ್ಲಿದ್ದ ಮಕ್ಕಳ ರಕ್ಷಣೆ ■ ಒಂದೇ ದಿನ 190 ಮಕ್ಕಳು ಸೇರಿ 284 ಜನ ವಶಕ್ಕೆ

ಬೆಂಗಳೂರು: ಭಿಕ್ಷಾಟನೆ ಕೂಪದಲ್ಲಿ ಸಿಲುಕಿ ನರಳುತ್ತಿರುವ ಮಕ್ಕಳ ರಕ್ಷಣೆಗಾಗಿ ಪೊಲೀಸರು 'ಆಪರೇಷನ್‌ಸ್ಮೈಲ್' ಕಾರ್ಯಾಚರಣೆ ಆರಂಭಿಸಿದ್ದಾರೆ. ಮಕ್ಕಳನ್ನು ಹೀನಾಯ ಸ್ಥಿತಿಯಲ್ಲಿ ತೋರಿಸಿ ಭಿಕ್ಷೆ ಬೇಡುವ ವ್ಯವಸ್ಥಿತ ಜಾಲ ನಗರದಲ್ಲಿದೆ. ಇದಕ್ಕೆ ಕಡಿವಾಣ ಹಾಕಲು ನಗರ ಪೊಲೀಸರು ಮುಂದಾಗಿದ್ದಾರೆ.

ಸಾರ್ವಜನಿಕವಾಗಿ ಭಿಕ್ಷೆ ಬೇಡುವವರ ವಿರುದ್ಧದ ಆಪರೇಷನ್ ಸ್ಮೈಲ್ ಕಾರ್ಯಾಚರಣೆಗೆ ಪೂರ್ವ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಪಿ.ಹರಿಶೇಖರನ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದ್ದು, ಗುರುವಾರ ಯೋಜನೆಗೆ ಚಾಲನೆ ನೀಡಲಾಗಿದೆ.

25 ಹಸುಗೂಸುಗಳು: ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೂ ನಗರದಾದ್ಯಂತ ಮಫ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಭಿಕ್ಷಾಟನೆಯಲ್ಲಿದ್ದ 190 ಮಕ್ಕಳನ್ನು ರಕ್ಷಿಸಲಾಗಿದೆ. ಇದರಲ್ಲಿ 25 ಹಸುಗೂಸುಗಳಿವೆ. ಮಕ್ಕಳ ತೋರಿಸಿ ಭಿಕ್ಷೆ ಬೇಡುತ್ತಿದ್ದ 86 ಹೆಂಗಸರು, 8 ಗಂಡಸರನ್ನು ವಶಕ್ಕೆ ಪಡೆಯಲಾಗಿದೆ.

ಮೆಜೆಸ್ಟಿಕ್, ಶಿವಾಜಿನಗರ, ಸಿಟಿ ಮಾರ್ಕೆಟ್, ಕೆ.ಆರ್.ಪುರ, ಸ್ಯಾಟ್‌ಲೈಟ್ ಬಸ್‌ನಿಲ್ದಾಣದ ಪ್ರಮುಖ ಸಿಗ್ನಲ್‌ಗಳು, ದೇವಸ್ಥಾನಗಳು ಸೇರಿ ಜನದಟ್ಟಣೆ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಇದಕ್ಕಾಗಿ ಸರ್ಕಾರ 5.5 ಲಕ್ಷ ರೂ. ಬಿಡುಗಡೆ ಮಾಡಿದೆ. ಎನ್‌ಜಿಒ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ ಇಲಾಖೆ, ಮಕ್ಕಳ ಕಲ್ಯಾಣಾಭಿವೃದ್ಧಿ ಸಮಿತಿ ಸಿಬ್ಬಂದಿ ನೆರವಿನೊಂದಿಗೆ 10 ಸದಸ್ಯರನ್ನೊಳಗೊಂಡ 7 ತಂಡ ರಚಿಸಲಾಗಿತ್ತು.

ಡಿಎನ್‌ಎ ಪರೀಕ್ಷೆ

ಭಿಕ್ಷಾಟನೆಗೆ ಬಳಸಿಕೊಂಡಿದ್ದ ಮಕ್ಕಳನ್ನು ಅಪಹರಿಸಿ ತಂದಿರುವ ಅಥವಾ ಕಳ್ಳ ಸಾಗಣೆ ಮಾಡಿರುವ ಸಾಧ್ಯತೆ ಇದೆ. ಹೀಗಾಗಿ ಮಕ್ಕಳ ಪಾಲಕರ ಪತ್ತೆಗೆ ಅವರನ್ನು ಡಿಎನ್‌ಎ ಪರೀಕ್ಷೆ ಒಳಪಡಿಸಲು ತೀರ್ಮಾನಿಸಲಾಗಿದೆ. ಸರ್ಕಾರಿ ಬಾಲ ಮಂದಿರದಲ್ಲಿ ಸ್ಥಳಾವಕಾಶದ ಕೊರತೆ ಹಿನ್ನೆಲೆಯಲ್ಲಿ 10 ಎನ್‌ಜಿಒ ಸಂಸ್ಥೆಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಸುಗೂಸಿನೊಂದಿಗೆ ಭಿಕ್ಷೆ ಬೇಡುತ್ತಿದ್ದ ಮಹಿಳೆಯನ್ನು ವಶಕ್ಕೆ ಪಡೆದ ಅಧಿಕಾರಿಗಳು.

ಆಪರೇಷನ್ ಸ್ಮೈಲ್ ಕಾರ್ಯಾಚರಣೆ ನಡೆಸಿ 190 ಮಕ್ಕಳು ಸೇರಿ 284 ಜನರನ್ನು ವಶಕ್ಕೆ ಪಡೆಯಲಾಗಿದೆ. ಮಕ್ಕಳನ್ನು ಬಳಸಿಕೊಂಡು ಭಿಕ್ಷೆ ಬೇಡುವವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ತೀರ್ಮಾನಿಸಲಾಗಿದೆ.

| ಪಿ. ಹರಿಶೇಖರನ್
ಹೆಚ್ಚುವರಿ ಪೊಲೀಸ್ ಆಯುಕ್ತ

ದಿನಕ್ಕೆ 300 ರೂ. ಕೊಟ್ಟರೆ ಮಗು ಸಿಗುತ್ತೆ!

ಮನೆ, ವಾಹನಗಳು ಬಾಡಿಗೆಗೆ ಸಿಗುವಂತೆ ಮಕ್ಕಳು ಸಹ ಬಾಡಿಗೆಗೆ ಸಿಗುತ್ತಾರೆ. ಇದೊಂದು ದೊಡ್ಡ ದಂಧೆಯಾಗಿದೆ ಎಂದು ಪೊಲೀಸ್ ಅಧಿಕಾರಿಗಳೇ ಹೇಳುತ್ತಾರೆ. ದಿನಕ್ಕೆ 300 ರೂ. ಕೊಟ್ಟರೆ ಮಗುವನ್ನು ನೀಡಲಾಗುತ್ತದೆ. ಅತ್ಯಂತ ಹೀನಾಯ ಸ್ಥಿತಿಯಲ್ಲಿ ಮಗು ಕಾಣಬೇಕು ಹಾಗೂ ಗಲಾಟೆ ಮಾಡದಿರಲು ಪ್ರಜ್ಞೆ ತಪ್ಪಿಸುವ ಔಷಧ, ಮಾತ್ರೆಗಳ ನೀಡಲಾಗುತ್ತದೆ. ಅಲ್ಲದೆ ಈ ಜಾಲಕ್ಕೆ ಸೇರಿಸುವ ಉದ್ದೇಶದಿಂದಲೆ ಮಕ್ಕಳನ್ನು ಕಿಡ್ನ್ಯಾಪ್ ಮಾಡುವ ಜಾಲವಿರುವ ಶಂಕೆ ವ್ಯಕ್ತವಾಗಿದ್ದು, ಈ ನಿಟ್ಟಿನಲ್ಲಿ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಎಲ್ಲೆಲ್ಲಿ ಎಷ್ಟು ಭಿಕ್ಷುಕರು ಸಿಕ್ಕರು

ವಿಭಾಗ	ಮಕ್ಕಳು	ಮಹಿಳೆಯರು	ಪುರುಷರು
ಪೂರ್ವ	15	22	06
ಪಶ್ಚಿಮ	35	12	02
ಉತ್ತರ	33	20	
ದಕ್ಷಿಣ	16	02	
ಆಗ್ನೇಯ	49	17	
ಈಶಾನ್ಯ	20	05	
ಕೇಂದ್ರ	22	06	
ಒಟ್ಟು	190	84	08

ಚಿನ್ನ ಮತ್ತಷ್ಟು ಅಗ್ಗ

■ 10 ಗ್ರಾಂಗೆ ₹ 24,980

■ ನಾಲ್ಕು ವರ್ಷಗಳಲ್ಲೇ ಕನಿಷ್ಠ ದರ

ನವದೆಹಲಿ: ಕಳೆದ ಕೆಲವು ದಿನಗಳಿಂದ ಕುಸಿಯುತ್ತಿರುವ ಚಿನ್ನದ ದರ ಇದೀಗ ನಾಲ್ಕು ವರ್ಷಗಳಲ್ಲೇ ಕನಿಷ್ಠ ಮೌಲ್ಯಕ್ಕೆ ಬಂದಿಳಿದಿದೆ. ನವದೆಹಲಿಯಲ್ಲಿ 10 ಗ್ರಾಂ ಚಿನ್ನದ ಬೆಲೆ 24,980 ರೂ.ಗೆ ಇಳಿಕೆಯಾಗಿದ್ದು, ಗುರುವಾರ 40 ರೂ. ಕುಸಿತ ಕಂಡಿದೆ. 2011ರ ಆಗಸ್ಟ್ 6ರ ನಂತರದಲ್ಲಿ ಇದೇ ಮೊದಲ ಬಾರಿಗೆ ಚಿನ್ನ ಈ ದರಕ್ಕೆ ಕುಸಿತ ಕಂಡಿದೆ. ಕಳೆದ ಮೂರು ದಿನಗಳಲ್ಲಿ 10 ಗ್ರಾಂ. ಚಿನ್ನದ ಬೆಲೆ ಒಟ್ಟಾರೆ 280 ರೂ. ಇಳಿಕೆಯಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಳೆದ ಐದು ವರ್ಷದಲ್ಲೇ ತೀವ್ರ ಕುಸಿತ ಕಂಡಿರುವ ಚಿನ್ನ ಸಿಂಗಾಪುರ ಮಾರುಕಟ್ಟೆಯಲ್ಲಿ ಔನ್ಸ್‌ಗೆ 1085 ರೂ.ವರೆಗೆ ತಲುಪಿತ್ತು. ಇನ್ನಷ್ಟು ಕುಸಿಯುವ ನಿರೀಕ್ಷೆ ಇರುವುದರಿಂದ ಚಿಲ್ಲರೆ ಆಭರಣ ವ್ಯಾಪಾರಿಗಳು ಖರೀದಿಗೆ ಮನಸು ಮಾಡುತ್ತಿಲ್ಲ. ಅಮೆರಿಕದ ಕೇಂದ್ರೀಯ ಬ್ಯಾಂಕ್‌ರೆಪೋ ದರವನ್ನು ಏರಿಕೆ ಮಾಡುವ ನಿರೀಕ್ಷೆ ಇರುವುದರಿಂದ ಹೂಡಿಕೆದಾರರು ಚಿನ್ನದ ಬದಲಿಗೆ ಬ್ಯಾಂಕಿಂಗ್ ಷೇರುಗಳ ಖರೀದಿಗೆ ತೊಡಗಿದ್ದಾರೆ. ಈ ಮಧ್ಯೆ ಬೆಳ್ಳಿಗೆ ನಾಣ್ಯ ಟಂಕಿಸುವ ಉದ್ಯಮದಲ್ಲೂ ಬೇಡಿಕೆ ಹೆಚ್ಚಾಗಿದೆ.

ಫೋಟೋಗ್ರಫಿ ತರಬೇತಿ

ಬೆಂಗಳೂರು: ಭಾರತೀಯ ವಿದ್ಯಾ ಭವನದ ಮಾಧ್ಯಮ ಭಾರತಿ, ಆ.8ರಿಂದ 2 ದಿನಗಳ ಫೋಟೋಗ್ರಫಿ ತರಬೇತಿ ಆಯೋಜಿಸಿದೆ. ಎಲ್ಲ ವಯೋಮಾನದವರೂ ಭಾಗವಹಿಸಬಹುದು. ಆಸಕ್ತರು ತಮ್ಮ ಇ-ಮೇಲ್ ವಿಳಾಸವನ್ನು ದೂ: 9986506475 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಬೇಕು.

IndianOil
ಮಾರ್ಕೆಟಿಂಗ್ ಡಿವಿಷನ್ - ದಕ್ಷಿಣ ಪ್ರಾಂತೀಯ ಕಾರ್ಯಾಲಯ
ಇ-ಟೆಂಡರ್‌ಗೆ ನೋಟೀಸ್
NIT ನಂ./ ಕೆಲಸದ ಹೆಸರು
RCC/SR/KASO/PT/03/15-16: ಮಂಗಳೂರಿನ ಎಕ್ಸ್-HPC ಹಾಗೂ BPC ಬಾಟ್ಲಿಂಗ್ ಪ್ಲಾಂಟ್‌ಗಳಲ್ಲಿ 5/10 ವರ್ಷದ LPG ಸಿಲಿಂಡರ್‌ಗಳ ಶಾಸನಬದ್ಧವಾದ ಪರಿಶೋಧನೆ ಮತ್ತು ಪೈಯಿಂಟಿಂಗ್ (ST&P) ಗಳಿಗಾಗಿ.
ಟೆಂಡರ್ ಡೌನ್‌ಲೋಡ್ ಅವಧಿ: 12.08.2015 - 02.09.2015
ಸಂಪರ್ಕಿಸಬೇಕಾದ ವ್ಯಕ್ತಿ: ಚೀಫ್ ಮ್ಯಾನೇಜರ್ (ಒಪ್ಪಂದ), ದೂರವಾಣಿ : 044 - 2833 3761;
ಈ-ಮೇಲ್: lgopinat@indianoil.in
Visit https://iocletenders.gov.in for downloading tender documents and participating in e-tenders.

ಪೇದೆ ಕೈಗೆ ಸಿಕ್ಕಿಬಿದ್ದ ಬೈಕ್ ಕಳ್ಳರು

■ ಮನೆ ಮುಂದೆ ನಿಲ್ಲಿಸುವ ವಾಹನಗಳೇ ಟಾರ್ಗೆಟ್

ಬೆಂಗಳೂರು: ಬೈಕ್ ಕಳವು ಮಾಡಿ ಪರಾರಿಯಾಗಲು ಯತ್ನಿಸಿದ ಮೂವರು ಕಳ್ಳರು ಕಾನ್ಸ್‌ಟೆಬಲ್ ಕೈಗೆ ಸಿಕ್ಕಿಬಿದ್ದಿದ್ದಾರೆ.

ಕೆ.ಆರ್. ಪುರದ ಇಮ್ರಾನ್ ಖಾನ್ (22), ಶಿವಾಜಿನಗರದ ನದೀಮ್ ಷರೀಫ್ (20) ಮತ್ತು ಕೆ.ಜಿ. ಹಳ್ಳಿಯ ಶಫಿ ಅಲಿಯಾಸ್ ಶೇಕ್ (20) ಬಂಧಿತರು. ಆರೋಪಿಗಳಿಂದ 15 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಶೋಕನಗರ ಠಾಣೆಯ ಹುಸೇನ್, ಬೈಕ್ ಕಳ್ಳರನ್ನು ಬಂಧಿಸಿದ ಕಾನ್ಸ್‌ಟೆಬಲ್. ಜು.30ರಂದು ರಾತ್ರಿ ಹೊಸೂರು ರಸ್ತೆ ಜಾನ್ಸನ್ ಮಾರ್ಕೆಟ್ ಹತ್ತಿರ ನಾಕಾಬಂದಿ ಮಾಡಿ ವಾಹನ ತಪಾಸಣೆ ಮಾಡುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಮ್ರಾನ್ ಖಾನ್ ಮತ್ತು ನದೀಮ್ ಷರೀಫ್ ಪೊಲೀಸರನ್ನು ಕಂಡು ದೂರದಲ್ಲೇ ರಸ್ತೆಬದಿ ಬೈಕ್ ನಿಲ್ಲಿಸಿದ್ದರು. ಸ್ವಲ್ಪಹೊತ್ತಿನ ಬಳಿಕ ಅಲ್ಲೇ ಬೈಕ್ ಬಿಟ್ಟು ಪರಾರಿಯಾಗಲು ಯತ್ನಿಸಿದ್ದರು. ಇವರ ವರ್ತನೆ ಕಂಡು ಅನುಮಾನಗೊಂಡ ಹುಸೇನ್, ಅವರ ಬಳಿಗೆ ತೆರಳಿ ವಿಚಾರಿಸಿದ್ದಾರೆ. ಇದರಿಂದ ಗಲಿಬಿಲಿಯಾದ ಆರೋಪಿಗಳು ಅಸಮರ್ಪಕ ಉತ್ತರ ನೀಡಿ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಹೊಯ್ಸಳ ವಾಹನ ಕರೆಸಿಕೊಂಡು ಇಬ್ಬರನ್ನೂ ವಶಕ್ಕೆ ಪಡೆದಿದ್ದಾರೆ.

ಠಾಣೆಗೆ ಕರೆದೊಯ್ದು ವಿಚಾರಿಸಿದಾಗ ವಿಲ್ಸನ್ ಗಾರ್ಡನ್‌ನಲ್ಲಿ ಬೈಕ್ ಕಳವು ಮಾಡಿ ಮಾರಾಟ ಮಾಡಲು ಹೋಗುತ್ತಿದ್ದುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ.

ಜಾನ್ಸನ್ ಮಾರ್ಕೆಟ್ ಬಳಿ ನಾಕಾಬಂದಿ ಮಾಡಿ ವಾಹನಗಳ ತಪಾಸಣೆ ಮಾಡುತ್ತಿದ್ದ ಕಾನ್ಸ್‌ಟೆಬಲ್ ಕರ್ತವ್ಯಪ್ರಜ್ಞೆಯಿಂದ ಕುಖ್ಯಾತ ಬೈಕ್ ಕಳ್ಳರು ಸಿಕ್ಕಿಬಿದ್ದಿದ್ದಾರೆ. ಆರೋಪಿಗಳಿಂದ 15 ಬೈಕ್ ಜಪ್ತಿ ಮಾಡಲಾಗಿದೆ.

| ಸಂದೀಪ್‌ಪಾಟೀಲ್
ಡಿಸಿಪಿ, ಕೇಂದ್ರ ವಿಭಾಗ

ಅವರು ನೀಡಿದ ಮಾಹಿತಿ ಮೇರೆಗೆ ಮತ್ತೊಬ್ಬ ಆರೋಪಿ ಶಫಿಯನ್ನು ಬಂಧಿಸಲಾಗಿದೆ.

ಜೈಲಿನಲ್ಲಿ ದೋಸ್ತಿ: ಬೈಕ್ ಕಳ್ಳನಾದ ಇಮ್ರಾನ್ ಈ ಹಿಂದೆ ಪೊಲೀಸರಿಂದ ಬಂಧಿತನಾಗಿ ಜೈಲು ಸೇರಿದ್ದ. ಕೊಲಾರ ಜಿಲ್ಲೆ ವೇಮಗಲ್ ಮೂಲದ ನದೀಮ್ ಷರೀಫ್ ಸಹ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ. ಕಾರಾಗೃಹದಲ್ಲೇ ಇಬ್ಬರ ಸ್ನೇಹವಾಗಿದ್ದು, ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ 6 ತಿಂಗಳಿಂದ ಶಫಿ ಜತೆಗೂಡಿ ಬೈಕ್ ಕಳವು ಮಾಡುತ್ತಿದ್ದರು. ವಾಣಿಜ್ಯ ಸಂಕೀರ್ಣಗಳು ಹಾಗೂ ಮನೆಗಳ ಮುಂದೆ ನಿಲ್ಲಿಸಿರುತ್ತಿದ್ದ ವಾಹನಗಳ ಟಾರ್ಗೆಟ್ ಮಾಡುತ್ತಿದ್ದ ಆರೋಪಿಗಳು ನಕಲಿ ಕೀ ಬಳಸಿ ಕಳವು ಮಾಡುತ್ತಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೋ ಕಾಮಗಾರಿಗಾಗಿ ಎರಡು ವರ್ಷದಿಂದ ಬಂದ್ ಮಾಡಲಾಗಿದ್ದ ವಿಧಾನಸೌಧದ ಎದುರಿನ ಅಂಬೇಡ್ಕರ್ ಬೀದಿಯನ್ನು ಗುರುವಾರ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

State Bank of India
Local Head Office, Bangalore Circle,
No.65, St.Marks Road, Bangalore – 560001.
EMPANELMENT OF TRAVEL AGENCIES FOR AIR TRAVEL
We propose to empanel Travel Agents to avail the services of air-ticket booking And for other allied services by State Bank of India and its branches in Karnataka. Applications are invited from certified IATA Agents handling Domestic and international air travel/tour packages and of good standing in this area of operation for at least 5 years. All statutory requirements must have been complied with. Those who are already empanelled with other PSUs will be given due weightage. Applications may be obtained from the Liaison Officer. SBI, LHO, Bangalore for details and tender documents log on to www.sbi.co.in/procurementnews.

ಕರ್ನಾಟಕ ಸಣ್ಣ ಮತ್ತು ಮಧ್ಯಮ ಉದ್ದಿಮೆದಾರರ ಸಂಘವು ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಗ್ರಾಹಕರ ಸಂತೃಪ್ತಿ ವಿಭಾಗದಲ್ಲಿ ಶ್ರೇಷ್ಠ ಉದ್ಯಮ ಪ್ರಶಸ್ತಿಯನ್ನು ಯಶ್ ಡೆವಲಪರ್ಸ್ ಪಡೆದು ಕೊಂಡಿದೆ. ನಗರದಲ್ಲಿ ನಡೆದ ಸಮಾರಂಭದಲ್ಲಿ ಸಂಸ್ಥೆ ಎಂಡಿ ಎಂ. ಮನೋಜ್ ಪ್ರಶಸ್ತಿ ಸ್ವೀಕರಿಸಿದರು.

ಅಂಗಾಂಗ ದಾನ ಮಾಡಿದ ಯುವಕ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ 22ರ ವಯಸ್ಸಿನ ಯುವಕ ಅನೇಕರಿಗೆ ಜೀವದಾನ ಮಾಡಿದ್ದಾನೆ. ಮೂರ್ಛೆ ರೋಗಿಯಾಗಿದ್ದ ಚಿಕ್ಕಬಳ್ಳಾಪುರದ ಉಮೇಶ ಎಂಬಾತನನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆತನ ಮಿದುಳು ನಿಷ್ಕ್ರಿಯಗೊಂಡಿದ್ದರಿಂದ ಸಂಬಂಧಿಗಳು ಆತನ ಪಿತ್ತಜನಕಾಂಗ, ಕಿಡ್ನಿ, ಹೃದಯ ದಾನ ಮಾಡಲು ಒಪ್ಪಿಗೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಉಮೇಶ್‌ನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಐಸಿಐಸಿಐ ಬ್ಯಾಂಕ್‌ನ ಕೋಟ್ಯಂತರ ರೂ. ದುರುಪಯೋಗ

ವಿಜಯಪುರ: ನಗರದ ಲಿಂಗದಗುಡಿ ರಸ್ತೆಯಲ್ಲಿರುವ ಐಸಿಐಸಿಐ ಬ್ಯಾಂಕ್ ಶಾಖೆಯ ವ್ಯವಸ್ಥಾಪಕ ಮತ್ತು ಕ್ಯಾಷಿಯರ್ ಸೇರಿ 1.5 ಕೋಟಿ ರೂ. ದುರುಪಯೋಗ ಮಾಡಿಕೊಂಡಿರುವುದು ಗುರುವಾರ ಬೆಳಕಿಗೆ ಬಂದಿದೆ. ಗ್ರಾಹಕರಿಗೆ ಹಣ ತಲುಪಿಸಬೇಕಿದೆ ಎಂದು ಹೇಳಿ ಬ್ಯಾಂಕ್ ವ್ಯವಸ್ಥಾಪಕ ವಿಜಯಸಾರಥಿ ಮತ್ತು ಕ್ಯಾಷಿಯರ್ ಸಚಿನ್ ಪಾಟೀಲ ಬ್ಯಾಂಕ್‌ನಲ್ಲಿದ್ದ 1.5 ಕೋಟಿ ರೂ.ಗಳನ್ನು ಬುಧವಾರವೇ ಡ್ರಾ ಮಾಡಿಕೊಂಡು ಹೋಗಿದ್ದಾರೆ. ಗುರುವಾರ ಹಣದ ಜಮಾ-ಖರ್ಚಿನ ವಿವರ ನೀಡದ ಹಿನ್ನೆಲೆ ಪ್ರಕರಣ ಬೆಳಕಿಗೆ ಬಂದಿದೆ. ಡಿವೈಎಸ್‌ಪಿ ಎಸ್.ಬಿ. ಪಾಟೀಲ, ಗೋಲಗುಮ್ಮಟ ಸಿಪಿಐ ಟಿ.ಎಸ್. ಸುಲ್ಪಿ ಮತ್ತು ಸಿಬ್ಬಂದಿ ಬ್ಯಾಂಕ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬ್ಯಾಂಕ್‌ನ ಹುಬ್ಬಳ್ಳಿ ವಿಭಾಗೀಯ ವ್ಯವಸ್ಥಾಪಕರು ನಗರದ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

SNOWMAN

SNOWMAN LOGISTICS LIMITED

Regd. Office: Sy. No. 36/1, Virgonagar, Old Madras Road, Bandapura Village, Bidarehalli Hobli, Bengaluru - 560 049. Tel: +91 80 3993 9500
Website: www.snowman.in, Email:investorrelations@snowman.in,
CIN: L15122KA1993PLC048636

STATEMENT OF STANDALONE UNAUDITED RESULTS FOR THE QUARTER ENDED JUNE 30, 2015

PART-I (Rs. in Lakhs)

Sr. No.	Particulars	3 months ended 30/06/2015 (Unaudited)	Preceding 3 months ended 31/03/2015 (Unaudited)	Previous year ended 31/03/2015 (Audited)
1.	Income from Operations			
	(a) Net Income from Operations	5,920.38	5,384.09	20,293.25
	(b) Other Operating Income	-	-	-
	Total Income from Operations (Net)	**5,920.38**	**5,384.09**	**20,293.25**
2.	Expenses			
	(a) Operating Expenses	3,595.96	2,943.47	11,745.04
	(b) Employee Benefits Expense	504.27	377.23	1,703.77
	(c) Depreciation and Amortisation Expense	666.80	652.28	2,451.45
	(d) Other expenses	578.35	666.52	2,142.44
	Total Expenses	**5,345.38**	**4,639.50**	**18,042.70**
3.	Profit from Operations before Other Income and Finance Costs (1-2)	575.00	744.59	2,250.55
4.	Other Income	129.14	197.76	465.40
5.	Profit from Ordinary Activities before Finance Costs (3+4)	704.14	942.35	2,715.95
6.	Finance Costs	244.90	262.97	1,242.62
7.	Profit from Ordinary Activities before Tax (5-6)	459.24	679.38	1,473.33
8.	Tax Expense			
	a. Minimum Alternate Tax	114.37	149.50	332.04
	b. Deferred tax	(208.44)	(895.25)	(1,333.57)
	Total Tax Expense	**(94.07)**	**(745.75)**	**(1,001.53)**
9.	**Net Profit from Ordinary Activities after Tax (7-8)**	**553.31**	**1,425.13**	**2,474.86**
10.	Paid-up Equity Share Capital (Face Value Rs. 10 each per equity share)	16,706.10	16,667.65	16,667.65
11.	Reserves (excluding Revaluation Reserves) as per balance sheet of previous accounting year	-	-	25,144.54
12.	Earnings Per Share of Rs. 10 each (not Annualised)			
	- Basic Rs.	0.33	0.86	1.67
	- Diluted Rs.	0.33	0.86	1.67
PART-II	**Select Information for the Quarter ended June 30, 2015**			
A	**Particulars of Shareholding**			
	1) Public Shareholding			
	- Number of Shares	99,806,876	99,422,376	99,422,376
	- Percentage of Shareholding	59.74%	59.65%	59.65%
	2) Promoter and Promoter Group Shareholding			
	a. Pledged/ Encumbered			
	- Number of Shares	-	-	-
	- Percentage of Shares (as a % of the Total Shareholding of Promoter and Promoter Group)	-	-	-
	- Percentage of Shares (as a % of the Total Share Capital of the Company)	-	-	-
	b. Non Encumbered			
	- Number of Shares	67,254,119	67,254,119	67,254,119
	- Percentage of Shares (as a % of the Total Shareholding of Promoter and Promoter Group)	100.00%	100.00%	100.00%
	- Percentage of Shares (as a % of the Total Share Capital of the Company)	40.26%	40.35%	40.35%
B	**Investor Complaints**	**3 months ended 30/06/2015**		
	Pending at the beginning of the quarter	-		
	Received during the quarter	66		
	Disposed off during the quarter	65		
	Remaining unresolved at the end of the quarter*	1		
	* 1 Pending complaint received during last week of quarter, same stands subsequently attended.			

Segment Reporting (Rs. in Lakhs)

Sr. No.	Particulars (Refer Notes Below)	3 months ended 30/06/2015 (Unaudited)	Preceding 3 months ended 31/03/2015 (Unaudited)	Previous year ended 31/03/2015 (Audited)
1.	**Segment Revenue**			
	(a) Temperature Controlled Services	5,851.19	5,338.11	20,120.29
	(b) Ambient Services	69.19	45.98	172.96
	(c) Unallocated	-	-	-
	Total	**5,920.38**	**5,384.09**	**20,293.25**
	Less: Inter Segment revenue	-	-	-
	Net Sales/Income from Operations	**5,920.38**	**5,384.09**	**20,293.25**
2.	**Segment Results**			
	(a) Temperature Controlled Services	879.26	1,044.84	3,502.50
	(b) Ambient Services	3.19	(8.94)	17.03
	(c) Unallocated	-	-	-
	Total	**882.45**	**1,035.90**	**3,519.53**
	Less: (i) Finance Cost	244.90	259.30	1,238.95
	(ii) Other un-allocable expenditure	304.56	290.75	1,268.41
	(iii) Un-allocable income	126.26	193.52	461.16
	Profit before Tax	**459.25**	**679.37**	**1,473.33**
3.	**Capital employed**			
	(a) Temperature Controlled Services	47,415.63		47,368.60
	(b) Ambient Services	818.06		7.34
	(c) Unallocated	(5,819.64)		(5,563.75)
	Total	**42,414.05**		**41,812.19**

The Company is into the business of "Cold Chain Related Logistics" as primary segment which includes providing transportation, cold storage and consignment agency facilities. Based on the risk, rewards and nature, the Company has considered "Temperature Controlled Services" and "Ambient Services" as reportable segments. The company's operation are such that all activities are confined only to India and hence there is no secondary reportable segment relating to the Company's Business.

Notes:

1 After review by Audit Committee, the Board of Directors of the Company have approved the results at their meeting held on August 5, 2015.

2 There was no exceptional/ extraordinary item.

3 The Company completed its Initial Public Offering (IPO) pursuant to which 4,20,06,038 equity shares of the company of Rs.10 each were allotted at a price of Rs.47 per equity share. The equity shares of the Company were listed on The National Stock Exchange of India Limited and BSE Limited on September 12, 2014. Accordingly the Company had drawn the results for the quarter ended September 30, 2014 for the first time in accordance with clause 41 of the equity listing agreement and hence the figures for the quarter ended June 30, 2014 have not been given.

4 Utilisation of funds raised through Initial Public Offering (IPO) of equity shares for setting up of new warehouse is as follows:

Particulars	Rs. In Lacs
Issue Proceeds	19,742.84
Less: Issue expenses	1,384.40
Net proceeds from IPO	18,358.44
Amount utilised	15,070.99
Funds to be utilised (remain invested in bank current account and deposits)	**3,287.45**

5 The above financial results for the quarter ended June 30, 2015 have been subject to a "Limited Review" by the auditors of the Company, as per listing agreement entered into with the stock exchanges in India.

6 Preceding 3 months ended 31/03/2015 figures have been reclassified/regrouped wherever necessary.

On behalf of the Board of Directors
For Snowman Logistics Limited

Place: Bangalore
Dated: August 5, 2015

Ravi Kannan
Wholetime Director & CEO

Adfactors 180